“ಇಲ್ಲ, ಇಲ್ಲ. ಅದು ಅವನಲ್ಲ.” ನಾನೆಂದೆ.

“ನಾನು ಮೊದಲಿಂದಲೂ ಹೇಳ್ತಾನೆ ಇದೀನಿ. ಅದು ಅರ್ಲ್‌ನದು ಅಲ್ಲವೇ ಅಲ್ಲ. ಪಾಪ, ಅದು ಅವನ ಯುವ ಮಡದಿ ಕೌಂಟೆಸ್‌ಳದು...”

“ಇಲ್ಲ. ಅಲ್ಲಿರುವ ದೆವ್ವ ಅರ್ಲನದೂ ಅಲ್ಲ, ಕೌಂಟೆಸ್‌ಳದೂ ಅಲ್ಲ. ಅದು ಯಾವುದು ಎಂದು ಹೇಗೆ ಹೇಳುವುದು... ಅದರಷ್ಟು ಭಯಂಕರ ದೆವ್ವ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ!” ನಾನು ಹೇಳಿದೆ.

“ಅಂದರೆ?” ಅವರು ಒಟ್ಟಿಗೇ ಕೇಳಿದರು.

“ಒಬ್ಬ ಯಃಕಶ್ಚಿತ್ ನರ ಮನುಷ್ಯನನ್ನು ಕಾಡುವ ಅತೀ ಭಯಂಕರ ದೆವ್ವವೆಂದರೆ –‘ಭಯ!!’ ಭಯಕ್ಕೆ ಬೆಳಕಿಲ್ಲ, ಸದ್ದಿಲ್ಲ, ತರ್ಕಕ್ಕೂ ಅದಕ್ಕೂ ಅಜಗಜಾಂತರ. ಅದು ನಮ್ಮನ್ನು ಕಿವುಡಾಗಿಸುತ್ತದೆ, ಕುರುಡಾಗಿಸುತ್ತದೆ. ನಮ್ಮ ಜಂಘಾಬಲವನ್ನೇ ಅಡಗಿಸುತ್ತದೆ. ಅದು ನನ್ನನ್ನು ಪಡಸಾಲೆಯಿಂದಲೂ ಹಿಂಬಾಲಿಸಿಕೊಂಡು ಬಂದಿತ್ತು. ಕೆಂಪು ಕೋಣೆಯಲ್ಲಿ ನನ್ನ ಮೇಲೆ–”

ನಾನು ಒಮ್ಮೆಲೇ ನಿಲ್ಲಿಸಿದೆ. ಕೊಂಚ ಕ್ಷಣ ಅಲ್ಲಿ ಮೌನ ನೆಲೆಸಿತು. ನನ್ನ ಕೈ ತನ್ನಷ್ಟಕ್ಕೇ ತಲೆಯ ಬ್ಯಾಂಡೇಜಿನ ಕಡೆಗೆ ಹೋಯಿತು. “ಮೇಣದ ಬತ್ತಿಗಳು ಒಂದರ ಹಿಂದೆ ಒಂದು ಆರತೊಡಗಿದವು. ನಾನು ಭಯ ಬಿದ್ದು ಹೊರಗೆ ಓಡಲಾರಂಭಿಸಿದೆ.”

ಕಣ್ಣಿಗೆ ಪಟ್ಟಿ ಕಟ್ಟಿದ್ದ ಗೂನು ಮುದುಕ ತಲೆಯನ್ನು ವಾರೆ ಮಾಡಿಕೊಂಡು ನನ್ನನ್ನೇ ನೋಡುತ್ತಾ ಹೇಳಿದ:

“ಇದು ನನಗೆ ಗೊತ್ತಿತ್ತು. ಅಂಧಕಾರದ ಶಕ್ತಿ. ಶಾಪಗ್ರಸ್ತ ಮನೆಯಲ್ಲಿ ಅದು ಎಲ್ಲೋ ಅಡಗಿಕೊಂಡು ಇರುತ್ತದೆ. ಹಗಲಿನಲ್ಲೂ ಕೂಡ. ಅಲ್ಲಿ ಇಲ್ಲಿ ಅಂತಿಲ್ಲ. ಪರದೆಗಳ ಹಿಂದೆ, ಬೀರುಗಳ ಹಿಂದೆ, ಮೂಲೆಗಳಲ್ಲಿ, ಮಂಚದಡಿಯಲ್ಲಿ... ನೀನು ಹೇಗೆ ತಿರುಗಿದರೂ ಅದು ನಿನ್ನ ಬೆನ್ನ ಹಿಂದಿರುತ್ತದೆ! ಸೂರ್ಯ ಮುಳುಗುತ್ತಿದ್ದಂತೆ ನಿನ್ನನ್ನು ಹಿಂಬಾಲಿಸಲು ಶುರು ಮಾಡುತ್ತದೆ. ಈ ಶಾಪಗ್ರಸ್ತ ಮನೆ ಭೂಮಿಯ ಮೇಲಿರುವಷ್ಟು ದಿನ ಅದೂ ಇರುತ್ತದೆ...”

### ಎಚ್.ಜಿ. ವೆಲ್ಸ್ (1866–1913)

ಕಾದಂಬರಿಕಾರ, ಪತ್ರಕರ್ತ, ಇತಿಹಾಸ ತಜ್ಞ. ನಾಟಕಕಾರನಾಗಿ ಹೆಸರುಗಳಿಸಿದ್ದ ಹರ್ಬರ್ಟ್ ಜಾರ್ಜ್ ವೆಲ್ಸ್ ಹುಟ್ಟಿದ್ದು ಇಂಗ್ಲೆಂಡಿನ ಕೆಂಟ್‌ನಲ್ಲಿ. ಅವನ ‘ಟೈಂ ಮೆಶಿನ್’ ಮತ್ತು ‘ದಿ ವಾರ್ ಆಫ್ ದಿ ವರ್ಲ್ಡ್’ ವೈಜ್ಞಾನಿಕ ಕಾದಂಬರಿಗಳನ್ನು ಈಗಲೂ ಓದುಗರು ಖುಷಿಪಟ್ಟು ಓದುತ್ತಾರೆ.

### ಜೆ.ವಿ. ಕಾರ್ಲೊ

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ 40ಕ್ಕೂ ಹೆಚ್ಚು ಸಣ್ಣಕತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 100ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.